MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - THURSDAY 15-6-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ರಿಫೈಂಡ್ ಸೋಯಾ ಎಣ್ಣೆ ಸೂರ್ಯಕಾಂತಿ ಎಣ್ಣೆಗಳ ಆಮದು ಸುಂಕ 5 ಶೇಕಡಾ ಇಳಿಕೆ

ಭಾರತ ಸರಕಾರ ರಿಫೈಂಡ್ ಸೋಯಾ ಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆಗಳ ಮೇಲಿನ ಆಮದು ಸುಂಕ ವನ್ನು 17.5 ಶೇಕಡಾದಿಂದ 12.5 ಶೇಕಡಾ ಕ್ಕೆ ಇಳಿಕೆ ಮಾಡಿದೆಯೆನ್ನಲಾಗಿದ್ದು, ಗುರುವಾರದಿಂದ ಅನ್ವಯವಾಗಲಿದೆಯೆನ್ನಲಾಗಿದೆ. ಹಿಂದಿನ ವರ್ಷದ ಈ ಅವಧಿಯಲ್ಲಿದ್ದ ದರಕ್ಕೆ ಹೋಲಿಸಿದಾಗ ಈ ವರ್ಷ ಖಾದ್ಯತೈಲ ದರ ಗಣನೀಯ ಇಳಿಕೆಯಾಗಿದೆ. ಭಾರತದ ಮೇ ತಿಂಗಳ ಪಾಮೆಣ್ಣೆ ಆಮದು ಹಿಂದಿನ ತಿಂಗಳಿಗಿಂತ 14 ಶೇಕಡಾ ಇಳಿಕೆಯಾಗಿ 439,173 ಟನ್‌ಗಳಾಗಿವೆಯೆನ್ನಲಾಗಿದೆ. ಸೋಯಾಎಣ್ಣೆ ಆಮದು 22 ಶೇಕಡಾ ಹೆಚ್ಚಳವಾಗಿ 318,887 ಟನ್‌ಗಳಾಗಿವೆಯೆನ್ನಲಾಗಿದೆ. ಸೂರ್ಯಕಾಂತಿ ಎಣ್ಣೆ ಆಮದು 18.5 ಶೇಕಡಾ ಹೆಚ್ಚಳವಾಗಿ 295,206 ಟನ್‌ಗಳಾಗಿವೆಯೆನ್ನಲಾಗಿದೆ.

## ಮಲೇಶಿಯನ್ ಪಾಮೆಣ್ಣೆ ದರ ಹೆಚ್ಚಳ

ಹಿಂದಿನೆರಡು ಸೆಶನ್‌ಗಳಲ್ಲಿ ಹೆಚ್ಚಳವಾಗಿದ್ದು, ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಇಂದೂ ಟನ್‌ಗೆ 5 ರಿಂಗಿಟ್ಸ್ ( 0.14%) ಹೆಚ್ಚಳದೊಂದಿಗೆ 3457 ರಿಂಗಿಟ್ಸ್ ($ 746.49) ಆಗಿದೆಯೆನ್ನಲಾಗಿದೆ. (ಆರಂಭಿಕ ವ್ಯವಹಾರ) . ಜೂನ್ 16–30 ಅವಧಿಯಲ್ಲಿ ಇಂಡೋನೇಶೀಯಾ ಪಾಮೆಣ್ಣೆ ರೆಫೆರೆನ್ಸ್ ದರ $ 811.68 ರಿಂದ $ 723.45 ಕ್ಕೆ ಇಳಿಸಿದೆಯೆನ್ನಲಾಗಿದೆ.

## ದರ ಹೆಚ್ಚಳ ನಿಯಂತ್ರಿಸಲು ಕೇಂದ್ರ, OMSS ನ್ವಯ ಅಕ್ಕಿ, ಗೋಧಿ ರಾಜ್ಯ ಸರಕಾರಗಳಿಗೆ ಮಾರಾಟ ನಿಲುಗಡೆ

ಕೇಂದ್ರ ಸರಕಾರದ ಪೂಲ್‌ನಿಂದ ಮುಕ್ತ ಮಾರುಕಟ್ಟೆ ನೀತಿಯನ್ವಯ ಮಾರಾಟ ಮಾಡುತ್ತಿದ್ದ ಅಕ್ಕಿ ಹಾಗೂ ಗೋಧಿ ಮಾರಾಟವನ್ನು ಹಿಂತೆಗೆಯಲಾಗಿದೆಯೆನ್ನಲಾಗಿದೆ. ಆದರೂ ಉತ್ತರ ಪೂರ್ವದ ರಾಜ್ಯಗಳು, ಪರ್ವತ ಪ್ರದೇಶ ರಾಜ್ಯಗಳು ಹಾಗೂ ಕಾನೂನು ಮತ್ತು ನಾಗರಿಕ ಸಮಸ್ಯೆಯಿರುವ ರಾಜ್ಯಗಳಿಗೆ ಹಾಗೂ ಪ್ರಾಕೃತಿಕ ವಿಕೋಪಗಳಿರುವ ರಾಜ್ಯಗಳಿಗೆ ಈಗಿನ ದರ ಕ್ವಿಂಟಾಲ್‌ಗೆ ರೂ.3400 ರ ದರದಲ್ಲಿ OMSS ಮಾರಾಟ ಮುಂದುವರಿಯುತ್ತದೆಯೆನ್ನಲಾಗಿದೆ. ಕೇಂದ್ರ ಸರಕಾರ ಜೂನ್ 12 ರಂದು ಗೋಧಿಯ ಮೇಲೆ ದಾಸ್ತಾನು ನಿರ್ಬಂಧ ಬಿಡಿಸಿದಾಗ ಅಕ್ರಮ ದಾಸ್ತಾನು ಹೊಂದುವುದನ್ನು ಹಾಗೂ ದರ ಹೆಚ್ಚಳ ತಡೆಯುವ ಸಲುವಾಗಿ ಅಕ್ಕಿ ಹಾಗೂ ಗೋಧಿಯನ್ನು ಅವಶ್ಯಕತೆಗನುಗುಣವಾಗಿ ಮುಕ್ತ ಮಾರುಕಟ್ಟೆಗೆ ( ಖಾಸಗಿ ವ್ಯಾಪಾರಿಗಳಿಗೆ) ಬಿಡಲು ನಿರ್ಧರಿಸಿದೆಯೆನ್ನಲಾಗಿದೆ. ಇದರನ್ವಯ 15 ಲಕ್ಷ ಟನ್ ಗೋಧಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಫ್ಲೋರ್ ಮಿಲ್ (ಹಿಟ್ಟಿನ ಗಿರಣಿಗಳು) ಹಾಗೂ ಖಾಸಗಿ ವ್ಯಾಪಾರಿಗಳಿಗೆ ಇ–ಆಕ್ಷನ್ ಮೂಲಕ ಬಿಡುಗಡೆಗೊಳಿಸಲಾಗುವುದೆನ್ನಲಾಗಿದೆ. ಹಾಗೂ ಮುಕ್ತ ಮಾರುಕಟ್ಟೆಗೆ ಬಿಡುಗಡೆ ಮಾಡುವ ಅಕ್ಕಿಯ ಪ್ರಮಾಣವನ್ನು ನಿಗದಿಪಡಿಸಿಲ್ಲವೆನ್ನಲಾಗಿದೆ. ಜನವರಿ 26 ರಂದು ಕೇಂದ್ರ ಸರಕಾರ, ರಾಜ್ಯ ಸರಕಾರಗಳು FCI ಯಿಂದ ಇ–ಏಲಂ ಇಲ್ಲದೆ ಮುಕ್ತ ಮಾರುಕಟ್ಟೆ ನೀತಿಯನ್ವಯ 2023 ರಲ್ಲಿ ಅಕ್ಕಿ ಹಾಗೂ ಗೋಧಿ ಖರೀದಿಸಲು ಅವಕಾಶ ಮಾಡಿತ್ತೆನ್ನಲಾಗಿದೆ. ಈಗ ಈ ಅವಕಾಶ ಹಿಂದೆಗೆಯಲಾಗಿದೆಯೆನ್ನಲಾಗಿದೆ.